(ಇಂದು ದಿನಾಂಕಃ 28-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ ಪ್ರತಿವಾದಿಯರ ಪರ SPR ವಕೀಲರಿಂದಃ**

ನನಗೆ ಓದಲು ಬರೆಯಲು ಬರುವುದಿಲ್ಲ, ಆದರೆ ನನ್ನ ಹೆಸರು ಬರೆಯಲು ಮಾತ್ರ ಬರುತ್ತದೆ. ನನ್ನ ತಂದೆ-ತಾಯಿ ತೀರಿ ಹೋಗಿದ್ದಾರೆ. ನನ್ನ ತಂದೆಗೆ 5 ಜನ ಮಕ್ಕಳು. ನನ್ನ ಮೂರು ಜನ ಹೆಣ್ಣು ಮಕ್ಕಳಿಗೆ ಮದುವೆ ಮಾಡಿ ಕೊಟ್ಟಿದ್ದೇನೆ. ನಿರ್ಮಲಾ ದೊಡ್ಡ ಮಗಳು. ಭಾರತಮ್ಮ ಎರಡನೇ ಮಗಳು. 4 ಮತ್ತು 5 ನೇ ಪ್ರತಿವಾದಿಯರಿಗೆ ನಾನು ಶಿಕ್ಷಣ ಕೊಡಿಸಿದ್ದೇನೆ. ಅವರು ಗುರುಮಿಠಕಲ, ಶಹಾಪೂರು ಮತ್ತು ಕುಂಚಾವರಂ ನಲ್ಲಿ ಓದಿದ್ದಾರೆ. ನಿರ್ಮಲನ ಗಂಡ ಅವಳಿಗೆ ಶಿಕ್ಷಣ ಕೊಡಿಸಿದ್ದಾರೆ ಎಂದರೆ ಸರಿಯಲ್ಲ. ಭಾರತಮ್ಮನ ಮದುವೆಗೆ ವಾದಿ ಖರ್ಚು ಮಾಡಿದ್ದಾರೆ ಎಂದರೆ ಸರಿಯಲ್ಲ. ನಿರ್ಮಲ ಪೋಲೀಸನೊಂದಿಗೆ ಪ್ರೇಮ ವಿವಾಹ ಆದ ಕಾರಣ ಅವರಿಗೆ ಯಾವುದೇ ರೀತಿಯ ಹಣ, ಒಡವೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿರ್ಮಲರ ಮದುವೆ ಕೋಡಂಗಲ್ ನಲ್ಲಿ ಆಗಿದೆ.

**(ವಾದಿ ಪರ ವಕೀಲರ ವಿನಂತಿಯ ಮೇರೆಗೆ ಮುಂದುವರಿದ ಪಾಟೀ ಸವಾಲಿಗೆ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.